# ಪ್ರಯೋಗಶೀಲ ಮನದ ಅಮೃತಫಲ

**ಪ್ರೊ. ಕೆ.ಬಿ. ಪ್ರಭುಪ್ರಸಾದ್**

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಶರಣ ಚಳವಳಿಯಲ್ಲಿ ಸಮಾಜದ ಎಲ್ಲ ಸಮುದಾಯದವರಲ್ಲೂ ಆಧ್ಯಾತ್ಮಿಕತೆ, ಅನುಭಾವ ಹಾಗೂ ಸಾಮಾಜಿಕ ಪ್ರಜ್ಞೆ ಮೂಡಿಬಂದ ಬಗೆಯು ಒಂದು ಕಾಲಘಟ್ಟದಲ್ಲಿ ಕಂಡುಬಂದ ಅಪೂರ್ವ ಬದಲಾವಣೆಯಾಗಿದೆ. ಎಲ್ಲ ಕಾಲಕ್ಕೂ ಸ್ಮರಣಾರ್ಹವಾದ ಈ ಚಳವಳಿಯಲ್ಲಿ ಬರುವ ಒಬ್ಬಾಕೆ ಶಿವಶರಣೆಯನ್ನು ಕುರಿತು ಬರೆದಿರುವ ಲೇಖಕರು ನಿವೃತ್ತ ಪ್ರಾಧ್ಯಾಪಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಗೀತರಚನಕಾರರೂ ಆಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

ಜಗತ್ತಿನ ಇತಿಹಾಸದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತಹ ಶಿವಶರಣರ ಚಳುವಳಿ ಅತ್ಯದ್ಭುತವಾದುದು. ೧೨ನೆ ಶತಮಾನದಷ್ಟು ಅಂದರೆ ಸುಮಾರು ೮೫೦ ವರ್ಷಗಳ ಹಿಂದೆ ನಡೆದ ಸಮಾಜೋ-ಧಾರ್ಮಿಕ ಚಳುವಳಿ ಶ್ರೀ ಬಸವೇಶ್ವರರ ಬಳುವಳಿ. ಉತ್ತಮ ಕುಲದಲ್ಲಿ ಹುಟ್ಟಿದರೂ ತನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ ಹಿರಿಯರಿಲ್ಲ ಎಂದು ಘೋಷಿಸಿದ ಭಕ್ತಿ ಭಂಡಾರಿ ಬಸವಣ್ಣ ಅತ್ಯಂತ ಕೆಳವರ್ಗದವರನ್ನೂ ಮೇಲೆತ್ತಿದ. ಮೇಲ್ಜಾತಿ- ಕೀಳ್‌ಜಾತಿ; ಶ್ರೇಷ್ಠ ವ್ಯಕ್ತಿ-ಕೀಳು ವೃತ್ತಿ, ಸ್ತ್ರೀ-ಪುರುಷ, ಸಿರಿವಂತ -ಬಡವ ಎಂಬ ಭೇದವಿಲ್ಲದೆ ಎಲ್ಲರೂ ಸಮಾನರು ಎಂಬ ತತ್ತ್ವವನ್ನು ಪ್ರತಿಪಾದಿಸಿದ ಮಹಾತ್ಮ! ಆತನ ಆದರ್ಶ ತತ್ತ್ವಗಳನ್ನೂ, ಮೌಲ್ಯಗಳನ್ನೂ ಈ ೨೧ನೇ ಶತಮಾನದಲ್ಲೂ ಪಾಲಿಸು ವುದರಲ್ಲಿ ನಾವು ಸೋತಿದ್ದೇವೆ.

ಶ್ರೇಷ್ಠ ಕುಲದವನಾದರೂ, ರಾಜ್ಯದ ಮುಖ್ಯಮಂತ್ರಿಯಾದರೂ ಸ್ವಲ್ಪವೂ ಅಹಂಕಾರವಿಲ್ಲದೆ, ಕಿಂಚಿತ್ತೂ ಸ್ವಾರ್ಥವಿಲ್ಲದೆ ತುಳಿತಕ್ಕೊಳಗಾದವರನ್ನು ಮೇಲೆತ್ತಿ ನಿಲ್ಲಿಸಿದ. ದಲಿತರ ಕೇರಿಗೆ ಹೋಗಿ ಅಸ್ಪೃಶ್ಯರೆಂಬ ಶಾಪಕ್ಕೆ ಗುರಿಯಾದವರನ್ನು ಅವರಿರುವಂತೆಯೆ ಮುಟ್ಟಿ ಅಪ್ಪಿಕೊಂಡ. ಅವರು ಅವಾಕ್ಕಾದರು. ಇಂತಹ ಮೇಲ್ಜಾತಿಯ ವ್ಯಕ್ತಿ ತಮ್ಮನ್ನು ಮುಟ್ಟುತ್ತಾನೆಂದು ಅವರು ನಿತ್ಯವೂ ಸ್ನಾನ ಮಾಡತೊಡಗಿದರು, ತಮ್ಮ ಮನೆ-ಕೇರಿಗಳನ್ನು ನಿತ್ಯ ಗುಡಿಸಿ, ಸಾರಿಸಿ ಸ್ವಚ್ಛವಾಗಿಟ್ಟುಕೊಂಡರು. ಮದ್ಯ-ಮಾಂಸಗಳ ಸೇವನೆಯನ್ನು ಬಿಟ್ಟರು. ಬಸವಣ್ಣ ಆತ್ಮೋದ್ಧಾರದ ಅಧಿಕಾರ, ಉತ್ತಮವಾಗಿ ಬಾಳುವ ಅವಕಾಶ ಇವು ಮೇಲು-ಕೀಳೆನ್ನದೆ ಮನುಷ್ಯರಾದ ಪ್ರತಿಯೊಬ್ಬರಿಗೂ ಇದೆ ಎಂದು ಘೋಷಿಸಿದ. ಓದು-ಬರಹ ವಂಚಿತರಾಗಿದ್ದ ಅವರು ಹೆಣ್ಣು-ಗಂಡೆನ್ನದೆ ಎಲ್ಲರೂ ವಿದ್ಯಾವಂತರಾದರು. ತಮ್ಮ ವಿಚಾರಗಳನ್ನೂ, ಆಧ್ಯಾತ್ಮಿಕ ಅನುಭವ-ಅನುಭಾವಗಳನ್ನೂ ವಚನ ರೂಪದಲ್ಲಿ ಅಭಿವ್ಯಕ್ತಗೊಳಿಸಲು ಸಮರ್ಥರಾದರು.

ಒಂದು ರಾಷ್ಟ್ರದ ಸಾರ್ವಭೌಮ ಶಕ್ತಿ, ಒಂದು ವಿಶ್ವವಿದ್ಯಾನಿಲಯ ಮಾಡಲಾಗದುದನ್ನು ಬಸವಣ್ಣ ಮಾಡಿ ತೋರಿಸಿದ. ಜನ ಸಾಮಾನ್ಯರಲ್ಲಿ ಜಾಗೃತಿಯನ್ನುಂಟುಮಾಡಿ, ಅವರಲ್ಲಿದ್ದ ಕೀಳರಿಮೆಯನ್ನು ಹೋಗಲಾಡಿಸಿ, ಆತ್ಮವಿಶ್ವಾಸ ಹುಟ್ಟುವಂತೆ ಮಾಡಿದ. ಆಗ ಅವರಲ್ಲೂ ತಮ್ಮ ವಿಚಾರಗಳನ್ನೂ ಶಿವಯೋಗ ಸಾಧನೆಯ ಅನುಭವ-ಅನುಭಾವಗಳನ್ನು ವಚನರೂಪದಲ್ಲಿ ಅಭಿವ್ಯಕ್ತಿಸಲು ಸಾಮರ್ಥ್ಯವುಂಟಾಯಿತು. ಜನಸಾಮಾನ್ಯರಿಗೂ ಅರ್ಥವಾಗಲೆಂದು ಆಡುಮಾತುಗಳ ವಚನದ ಸಿದ್ಧರೂಪವನ್ನು ಇದಕ್ಕೂ ಮೊದಲು ಜೇಡರ ದಾಸಿಮಯ್ಯ ಮೇಲ್ಪಂಕ್ತಿಯ ಹಾಗೆ ಮುಂದಿಟ್ಟಿದ್ದ. ಬಸವಾದಿ ಎಲ್ಲ ವಚನಕಾರರಿಗೂ ಅದು ಮಾದರಿಯಾಯಿತು.

ವಚನ ಎಂದರೆ ಪ್ರಮಾಣ, ಪ್ರತಿಜ್ಞೆ ಎಂದು ಅರ್ಥ. ನುಡಿದಂತೆ ನಡೆವ ಆಶ್ವಾಸನೆ. ಪ್ರತಿಯೊಂದು ವಚನವೂ ಆ ವಚನ ಬರೆದವರ ಇಷ್ಟದೈವದ ಹೆಸರು ಅಂಕಿತನಾಮವಾಗಿ ಇಂಥವರ ವಚನ ಎಂದು ಗುರುತಿಸಬಹುದು. ಶರಣರ ವಚನಸಾಹಿತ್ಯ ವೀರಶೈವ ಧರ್ಮಗ್ರಂಥವಾಗಿದೆ. ವೀರಶೈವರಾದವರು ಹೇಗಿರಬೇಕು ಹೇಗೆ ಬಾಳಬೇಕು ಎಂಬುದರ ಮಾರ್ಗದರ್ಶಿಯಾಗಿದೆ. ಬಸವಣ್ಣನವರು ಜನಸಾಮಾನ್ಯರಿಗಾಗಿ ವಚನಗಳನ್ನು ಬರೆದರು. ಅದು ಎಲ್ಲಿಯೂ ಉಪದೇಶದಂತೆ, ಬೋಧನೆಯಂತೆ ಇಲ್ಲ. ಆತ್ಮಾವಲೋಕನದಂತಿದೆ.

ವಚನಗಳು ಶರಣರ ಪ್ರಯೋಗಶೀಲ ಮನಸ್ಸಿನ ಅಮೃತ ಫಲ. ಅವುಗಳಲ್ಲಿ ಜನಪರ ಧೋರಣೆ ಎದ್ದುಕಾಣುತ್ತದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಅವರು ಮಾತುಗಳನ್ನು ಬಳಸಿದ ರೀತಿಯಿಂದ ಆಡುಮಾತಿಗೆ ಅಪೂರ್ವವಾದ ಶಕ್ತಿಬಂದಿತು. ಜಡ್ಡುಕಟ್ಟಿದ ಅರ್ಥಹೀನ ಸಂಪ್ರದಾಯಗಳಲ್ಲಿ, ಮೂಢನಂಬಿಕೆಗಳಲ್ಲಿ, ಮುಳುಗಿದ್ದ ಸಾಮಾನ್ಯ ಜನ ಅವುಗಳಿಂದ ಮೈಕೊಡವಿ ಮೇಲೆದ್ದು ವಿಚಾರವಂತರಾದರು. ಹೃದಯವಂತಿಕೆ, ವೈಚಾರಿಕತೆ, ಸತ್ಯ, ಧರ್ಮ, ಪ್ರೇಮ, ಶಾಂತಿ ಮತ್ತು ಅಹಿಂಸೆ, ಎಂಬ ಮೂಲ ಮಾನವೀಯ ಮೌಲ್ಯಗಳು ಸಮನ್ವಯಗೊಂಡ ವ್ಯಕ್ತಿವಿಕಾಸನಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದರಿಂದ, ಲೌಕಿಕ ಬದುಕಿನಲ್ಲೂ ಪಾರಮಾರ್ಥಿಕ ಸಾಧನೆಯಲ್ಲೂ ಶ್ರೇಷ್ಠರಾಗಿ ಇಹದಲ್ಲೂ ಸಲ್ಲುವವರಾಗಿ ಪರದಲ್ಲೂ ಸಲ್ಲುವವರಾದರು.

ಸಹಮಾನವರಿಗೆ ಮಾತ್ರವಲ್ಲ ಸಕಲ ಜೀವಿಗಳಿಗೂ ಲೇಸನೇ ಬಯಸುವ ಶರಣರು ಶ್ರೇಷ್ಠ ಕುಲಜರು ಎಂದು ಬಸವಣ್ಣ ಸಾರಿ



ಹೇಳಿದ. ಜೊತೆಗೆ ಕಾಯಕ-ದಾಸೋಹ ಎಲ್ಲ ವೀರಶೈವರು, ಅಷ್ಟೇ ಏಕೆ ಮನುಷ್ಯರಾದವರೆಲ್ಲ ಕೈಗೊಳ್ಳಬೇಕೆಂದು, ಅವುಗಳ ಅರ್ಥವನ್ನು ಸ್ಪಷ್ಟಪಡಿಸಿದ. ಯಾವುದೇ ವೃತ್ತಿಯನ್ನು ಮೇಲೆನ್ನದೆ ಕೀಳೆನ್ನದೆ ಪ್ರಾಮಾಣಿಕವಾಗಿ ಮಾಡಿ, ಮಾಡಿದಷ್ಟಕ್ಕೆ ತಕ್ಕ ಸಂಭಾವನೆಯನ್ನು ಮಾತ್ರ ತೆಗೆದುಕೊಳ್ಳುವುದೇ ಸತ್ಯ-ಶುದ್ಧ-ಕಾಯಕದ ಅರ್ಥ. ಕಾಸಿನಷ್ಟು ಕೆಲಸ ಮಾಡಿ ರೂಪಾಯಿಯಷ್ಟು ಸಂಭಾವನೆಗೆ ಆಸೆಪಡುವುದಿರಲಿ, ಖುಷಿಗೆ ಹೆಚ್ಚು ಕೊಟ್ಟರೂ ನಿರಾಕರಿಸಬೇಕು. ಹಾಗೆ ಬಂದ ಹಣದಲ್ಲಿ ತಮ್ಮ ಸರಳವಾದ ಜೀವನಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ತೆಗೆದುಕೊಂಡು, ಇಂದಿಂಗೆ-ನಾಳಿಂಗೆ ಎಂದು ಸಂಗ್ರಹಮಾಡದೆ ಅದನ್ನು ಇಲ್ಲದವರೊಂದಿಗೆ ಹಂಚಿಕೊಳ್ಳಬೇಕು-ಜಂಗಮರಿಗೆ, ಸ್ವಾರ್ಥ-ಅಹಂಕಾರ ಬಿಟ್ಟು, ಸೇವೆ ಎಂಬ ಭಾವದಲ್ಲಿ ವಿನಿಯೋಗಿಸಬೇಕು. ಇದು ದಾಸೋಹ ಎಂಬ ಪರಿಕಲ್ಪನೆ. ಇದನ್ನು ಶರಣ-ಶರಣೆಯರು ಅನುಷ್ಠಾನ ಮಾಡಿದರು.

ಇದು ಸಾಧ್ಯ ಎಂಬುದಕ್ಕೆ ನಿದರ್ಶನ ಆಯ್ದಕ್ಕಿ ಲಕ್ಕಮ್ಮ ಎಂಬ ಹೆಸರಿನ, ಶರಣ ಮಾರಪ್ಪನ ಪತ್ನಿ ನಡೆದುಕೊಂಡ ರೀತಿ. ಆ ಘಟನೆಯನ್ನು ಇಲ್ಲಿ ಪ್ರಸ್ತಾಪಿಸುವುದು ಉಚಿತ. ಜೊತೆಗೆ ಪುರುಷರಿಗೆ ಸರಿಸಮಾನವಾಗಿ ಮಹಿಳೆಯೂ ಶಿವಭಕ್ತಿ ಸಂಪನ್ನಳಾಗಿ ಕಾಯಕ-ದಾಸೋಹ ತತ್ತ್ವಗಳನ್ನು ಪಾಲಿಸುತ್ತ, ಪತಿಯಲ್ಲಿ ಭಕ್ತಿ-ಗೌರವಗಳಿದ್ದರೂ ಪತಿ ತಿಳಿಯದೆ ತಪ್ಪು ಮಾಡಿದಾಗ ಅದನ್ನು ತಿದ್ದಿ ಪತಿಗೆ ತಿಳುವಳಿಕೆ ಉಂಟಾಗುವಂತೆ ಮಾಡುತ್ತಿದ್ದುದನ್ನು ಆಕೆಯ ಒಂದು ವಚನ ಸ್ಪಷ್ಟಪಡಿಸುತ್ತದೆ.

ಈ ದಂಪತಿಗಳ ಹಿನ್ನೆಲೆಯನ್ನು ಸ್ವಲ್ಪ ತಿಳಿಯವುದು ಉಚಿತ. ಲಕ್ಕಮ್ಮ-ಮಾರಯ್ಯ, ರಾಯಚೂರು ಜಿಲ್ಲೆಯ ಲಿಂಗಸುಗೂರು ಬಳಿಯ ಗ್ರಾಮದವರು. ಅಮರೇಶ್ವರ ಲಿಂಗ ಅವರ ಇಷ್ಟದೈವ. ಬಸವಣ್ಣನವರ ಭಕ್ತಿ, ವಿನಯ, ಕ್ರಾಂತಿಕಾರಿಕ ವಿಚಾರಗಳನ್ನು ಕೇಳಿ ಅವರನ್ನು ನೋಡಲು ಕಲ್ಯಾಣನಗರಿಗೆ ಬಂದರು. ಬಂದವರು ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ, ಕಲ್ಯಾಣದಲ್ಲೆ ನೆಲೆಸಿದರು. ಮಾರಯ್ಯ ಅವರು ಕೈಗೊಂಡ ಕಾರ್ಯ ಬಸವಣ್ಣನವರ ನಿವಾಸವಾಗಿದ್ದ ಮಹಾಮನೆಯಲ್ಲಿ ನಡೆಯುತ್ತಿದ್ದ ನಿತ್ಯ ದಾಸೋಹಕ್ಕೆ ಬರುತ್ತಿದ್ದ ಅಕ್ಕಿಮೂಟೆಗಳನ್ನು ಒಳಕ್ಕೆ ಸಾಗಿಸುವಾಗ ಅಂಗಳದಲ್ಲಿ ಸೋರಿ ಸುರಿದ ಅಕ್ಕಿಯನ್ನು, ಮಣ್ಣಿನಲ್ಲಿ ವ್ಯರ್ಥವಾಗಿ ಸೇರಿಹೋಗಬಾರದೆಂದು, ಆಯ್ದು ಮನೆಗೆ ತರುವುದೆ ಅವರ ಕಾಯಕ. ದಿನವೂ ತಮಗೆಷ್ಟು ಅಗತ್ಯವೋ ಅಷ್ಟನ್ನು ಮಾತ್ರ ತರುತ್ತಿದ್ದವರು ಒಂದು ದಿನ ಯಾವುದೋ ಜ್ಞಾನದಲ್ಲಿ ಆಯ್ದ ಅಕ್ಕಿ ಎಂದಿಗಿಂತಲೂ ಹೆಚ್ಚಾಗಿದ್ದರೂ ಮನೆಗೆ ತಂದು ಹೆಂಡತಿಯ ಕೈಯಲ್ಲಿ ಕೊಟ್ಟರು. ಆಕೆಗೆ ಅದು ಎಂದಿಗಿಂತ ಹೆಚ್ಚಾಗಿರುವುದು ನೋಡಿದ ಕೂಡಲೆ ತಿಳಿಯಿತು.

ಹಿಂದೆ ಗಂಡ ಅನುಭವಮಂಟಪದ ಗೋಷ್ಠಿಯಲ್ಲಿ ಮೈಮರೆತಾಗ ''ಕಾಯಕ ನಿಂದಿತ್ತು, ಹೋಗಯ್ಯ ಎನ್ನಾಳ್ದನೆ'', ಎಂದು ಉಚ್ಚರಿಸಿ ಅಕ್ಕಿ ಆಯಲು ಕಳಿಸಿದ್ದ ಲಕ್ಕಮ್ಮ, ಆ ದಿನ ತಂದ ಹೆಚ್ಚಿಗೆ ಅಕ್ಕಿಯನ್ನು ನೋಡಿ, ''ಒಮ್ಮಾನವ ಮರೆತು ಇಮ್ಮಾನದಲ್ಲಿ ತಂದಿರಿ'', ಹೋಗಿ ಹೆಚ್ಚಾದ ಅಕ್ಕಿಯನ್ನು ಅಲ್ಲಿಯೆ ಸುರಿದು ಬನ್ನಿ ಎಂದು ಹೇಳಿ ಕಳಿಸಿದಳು. ಮಾರಯ್ಯನಿಗೆ ತನ್ನ ತಪ್ಪಿನ ಅರಿವಾಗಿ ಆಕೆ ಹೇಳಿದಂತೆ ಮಾಡಿದ. ಈ ಸಂದರ್ಭದಲ್ಲಿ ಲಕ್ಕಮ್ಮ ಹೇಳಿದ ಮಾತು ಈ ವಚನ:

''ಆಸೆಯೆಂಬುದು ಅರಸಿಂಗಲ್ಲದೆ  
ಶಿವಭಕ್ತರಿಗುಂಟೆ ಅಯ್ಯಾ?  
ರೋಷವೆಂಬುದು ಯಮದೂತರಿಗಲ್ಲದೆ  
ಅಜಾತರಿಗುಂಟೆ ಅಯ್ಯಾ ?  
ಈಸಕ್ಕಿಯಾಸೆ ನಿಮಗೇಕೆ?  
ಈಶ್ವರನೊಪ್ಪ ಮಾರಯ್ಯಪ್ರಿಯ  
ಅಮರೇಶ್ವರ ಲಿಂಗಕ್ಕೆ ದೂರ, ಮಾರಯ್ಯ .''

ಅಂದಂದಿನ ಬದುಕಿಗೆ ಎಷ್ಟು ಬೇಕೋ ಅಷ್ಟನ್ನು ಪಡೆದು ತರಬೇಕು. ಯಾವುದನ್ನೂ ಸಂಗ್ರಹಿಸಿ ಇಡಬಾರದು. ಎಂಥಾ ತತ್ತ್ವ! ಎಂಥಾ ತಿಳಿವಳಿಕೆ! ಎಂಥಾ ಆಚರಣೆ!

ಕುರುಡು ಕಾಂಚಾಣ ಕುಣಿಯುತ್ತಿರುವ, ಕಾಲಿಗೆ ಬಿದ್ದವರ ತುಳಿಯುತ್ತಿರುವ ಈ ಕಾಲದಲ್ಲಿ, ''ಇಂದಿಂಗೆಂದು ನಾಳಿಂಗೆಂದು ಸಂಗ್ರಹಿಸಿದೆನಾದಡೆ ನಿಮ್ಮಾಣೆ!'' ಎನ್ನುವವರು ಯಾರಿದ್ದಾರೆ?

ಎಷ್ಟು ಹಣ ಬಂದರೂ ತೃಪ್ತಿಯಾಗದೆ ಸಂಗ್ರಹಿಸಿಡುವ ಲೋಭಿಗಳು ವಿಜೃಂಭಿಸುವ ಈ ಕಾಲದವರಿಗೆ ಶರಣರ ನಿತ್ಯ ತೃಪ್ತಿ ಅರ್ಥವಾಗುವುದಿಲ್ಲ. ''ಆಸೆ ಎಂಬುದು ಅರಸಿಂಗಲ್ಲದೆ

ಶಿವಭಕ್ತರಿಗೆ ಉಂಟೇ ಅಯ್ಯಾ'' ಎಂಬ ಒಬ್ಬ ಹೆಣ್ಣು ಮಗಳು ಹೇಳುವ ಕಾಲ ಮತ್ತೆ ಬರುವುದೇ?

''ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೇ?....
ಎನಗೆ ಮಾರಯ್ಯ ಪ್ರಿಯ ಅಮರೇಶ್ವರಲಿಂಗವುಳ್ಳನ್ನಕ್ಕ
ಆರ ಹಂಗಿಲ್ಲ ಮಾರಯ್ಯಾ''

— ಇಂಥ ದೃಢವಾದ ಶ್ರದ್ಧೆ ಯಾರಲ್ಲಿದೆ?

''ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು
ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲಿ
ಸುಜಲವ ತುಂಬಿದಂತೆ
ಮಾರಯ್ಯಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ''

ಇನ್ನೊಂದು ವಚನದಲ್ಲಿ:

''ಮಾಡಿ ನೀಡಿ ಹೋದೆನೆಂಬಾಗ ಕೈಲಾಸವೇನು ಕೈ ಕೂಲಿಯೆ?''

ನಾನು ಇಷ್ಟು ಪೂಜೆ ಮಾಡಿದೆ, ಅಷ್ಟು ದಾನಮಾಡಿದೆ, ಅದಕ್ಕೆ ತಕ್ಕ ಪುಣ್ಯ ಬರಲಿ ಎನ್ನುವುದಕ್ಕೆ ಮಾಡಿದ್ದೇನು ಕೈಕೂಲಿ ಗಾಗಿಯೆ?

ಫಲಾಪೇಕ್ಷೆಯಿಲ್ಲದ ಕರ್ಮ, ಪೂಜೆ ಶ್ರೇಷ್ಠ ಎಂಬ ಮಾತು ಭಗವದ್ಗೀತೆಯ ಕಾಲದಿಂದಲೂ ಭಾರತದಲ್ಲಿದೆ.

ಶರಣೆ ಲಕ್ಕವ್ವೆಯ ವಚನಗಳು ೧೨ ಮಾತ್ರ ದೊರೆತಿವೆ. ಲಕ್ಕವ್ವೆ ಒಬ್ಬ ಸಾಮಾನ್ಯ ಮಹಿಳೆ, ಬಡತನದಿಂದ ಬಾಳಿದರೂ ಸುಖ, ಶಾಂತಿ, ನೆಮ್ಮದಿ, ತೃಪ್ತಿಗಳಿಂದ ಬಾಳಿದ, ಹೃದಯದ ಶ್ರೀಮಂತಿಕೆಯಿದ್ದ ಸಾಧಾರಣ ಹೆಣ್ಣು. ಇಂಥ ಮಹಾ ಮಹಿಳೆ ಯರು ನಮ್ಮ ಭಾರತದೇಶದಲ್ಲಿ, ಅದೂ ಕನ್ನಡನಾಡಿನಲ್ಲಿ ಅನೇಕರು ಇದ್ದರು ಎಂಬುದು ಬರೀ ಹೆಮ್ಮೆಯ ವಿಷಯ ವಾಗದೆ ಅನುಸರಿಸಬೇಕಾದ ಮಾದರಿ ಆಗಬೇಕು.

ಹಾಗೆಂದೇ ಶರಣ ಜೇಡರ ದಾಸಿಮಯ್ಯ–,

''ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ;
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ ರಾಮನಾಥಾ!''

ಎನ್ನುತ್ತಾನೆ. ಒಂದರೆಘಳಿಗೆಯಲ್ಲಿ ಜೀವಮಾನ ಪರ್ಯಂತ ತಿಳಿದುಕೊಳ್ಳುವಂತಹ ಶರಣರ ಸೂಳ್ನುಡಿಗಳ ಸಂಪತ್ತು, ಲೋಕ ಕ್ಕೆಲ್ಲ ಹಂಚಬೇಕಾದದ್ದು.

ಇದು ಭಾರತೀಯರಾದ ನಾವೆಲ್ಲರೂ ಹೆಮ್ಮೆಪಡುವ ವಿಚಾರ.

## ಶ್ರೀಮಾತೆಯವರ ಉಪದೇಶಗಳು



✿ ಒಬ್ಬಾಕೆ ಮಹಿಳೆ ಬರೆದಿದ್ದಳು, 'ಅಮ್ಮಾ, ನನಗೆ ಸಣ್ಣ ವಯಸ್ಸು. ನನ್ನ ಅತ್ತೆ ಮಾವಂದಿರು ಅಲ್ಲಿಗೆ ಬರಲು ಅನುಮತಿ ನೀಡುತ್ತಿಲ್ಲ. ಅವರ ಅನು ಮತಿಯಿಲ್ಲದೆ ಅಲ್ಲಿಗೆ ಹೇಗೆ ಬರಲಿ? ನನಗೆ ನಿಮ್ಮ ಕೃಪೆಯನ್ನು ಪಡೆಯುವ ಅಭಿಲಾಷೆಯಿದೆ' ಇತ್ಯಾದಿ. ಅವಳಿಗೆ ಶ್ರೀಮಾತೆ ಹೀಗೆ ಬರೆಯಲು ಹೇಳಿದರು, ''ನೋಡಮ್ಮಾ, ನೀನು ಇಲ್ಲಿಗೆ ಬರುವ ಆವಶ್ಯಕತೆಯೇನೂ ಇಲ್ಲ. ಯಾವ ಭಗ ವಂತ ಇಡೀ ಜಗತ್ತು, ಬ್ರಹ್ಮಾಂಡ ಇತ್ಯಾದಿಗಳನ್ನೆಲ್ಲ ಸೃಷ್ಟಿಸಿ ದ್ದಾನೋ ಅವನನ್ನೇ ನೀನು ಪ್ರಾರ್ಥಿಸು. ಅವನೇ ನಿನ್ನ ಮೇಲೆ ಕೃಪೆದೋರುವನು.''

✿ ಶುಕ, ವ್ಯಾಸ ಇವರೆಲ್ಲ ಹೆಚ್ಚೆಂದರೆ ಕಟ್ಟಿರುವೆಗಳು. ಭಗ ವಂತನ ಸೃಷ್ಟಿ ಅನಂತವಾಗಿದೆ. ನೀನು ಒಂದು ವೇಳೆ ಭಗವಂತ ನನ್ನು ಪ್ರಾರ್ಥಿಸದಿದ್ದರೆ ಅದರಿಂದ ಅವನಿಗೇನು ನಷ್ಟ ? ಅದು ನಿನ್ನ ದೌರ್ಭಾಗ್ಯವಷ್ಟೆ. ಅನೇಕ ಮಂದಿ ಭಗವಂತನನ್ನು ನೆನೆಯ ವುದೂ ಇಲ್ಲ. ಭಗವಂತನ ಮಾಯೆ ಎಂಥದೆಂದರೆ, ಎಲ್ಲವನ್ನೂ ಮರೆತುಬಿಡುವಂತೆ ನಮ್ಮನ್ನು ಇರಿಸಿದ್ದಾನೆ — 'ಅವರು ಚೆನ್ನಾ ಗಿಯೇ ಇದ್ದಾರೆ, ಹಾಗೆಯೇ ಇರಲಿ' ಎಂದುಕೊಳ್ಳುತ್ತಾನೆ.

✿ ಕೆಳಗಡೆ ಹರಿಯುವುದೇ ನೀರಿನ ಸ್ವಭಾವ. ಅದನ್ನು ಸೂರ್ಯನ ಕಿರಣಗಳು ಆಕಾಶಕ್ಕೆ ಸೆಳೆದುಕೊಳ್ಳುವವು. ಅದೇ ರೀತಿ ಮನಸ್ಸಿನ ಸ್ವಭಾವ ಕೆಳಗಡೆ ಹರಿಯುವುದು — ಭೋಗದ ಕಡೆಗೆ. ಭಗವಂತನ ಕೃಪೆ ಅದನ್ನೂ ಊರ್ಧ್ವಗಾಮಿಯನ್ನಾಗಿ ಮಾಡುವುದು.

✿ **ಶಿಷ್ಯ :** ''ಅಮ್ಮಾ, ಶ್ರೀರಾಮಕೃಷ್ಣರ ದರ್ಶನವೇಕೆ ಆಗುತ್ತಿಲ್ಲ?''

**ಶ್ರೀಮಾತೆ :** ಅವರನ್ನು ಸತತವೂ ಪ್ರಾರ್ಥಿಸುತ್ತಿರು. ಕ್ರಮೇಣ ದರ್ಶನವುಂಟಾಗುವುದು. ಎಷ್ಟೊಂದು ಮಂದಿ ಋಷಿ ಮುನಿಗಳು ಯುಗಯುಗಾಂತರಗಳಿಂದ ತಪಸ್ಸು ಮಾಡಿಯೂ ಭಗವಂತನ ದರ್ಶನ ಪಡೆಯಲಿಲ್ಲ, ನಿನಗೆ ಇದ್ದಕ್ಕಿದ್ದಂತೆ ಅದು ಲಭಿಸುವುದೆ? ಈ ಜನ್ಮದಲ್ಲಿ ಒಂದು ವೇಳೆ ಲಭಿಸದಿದ್ದರೆ ಮುಂದಿನ ಜನ್ಮದಲ್ಲಿ ಲಭಿಸುವುದು. ಮುಂದಿನ ಜನ್ಮದಲ್ಲಿ ಸಿಗದಿದ್ದರೆ ಅದರ ಮುಂದಿನ ಜನ್ಮದಲ್ಲಿ ಸಿಗಬಹುದು. ಭಗವಂತನ ಸಾಕ್ಷಾತ್ಕಾರ ವೇನು ಅಷ್ಟೊಂದು ಸುಲಭವೆ? ಆದರೆ ಈ ಸಲ ಶ್ರೀರಾಮ ಕೃಷ್ಣರು ಸುಲಭವಾದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೨೬೭–೬೯